ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಸ್ವಾಮಿ, ಕಾಂಗ್ರೆಸ್ಸಿನವರೇ ಆಗಲಿ, ವಿರೋಧ ಪಕ್ಷದವರೇ ಆಗಲಿ, ಯಾರೇ ಆಗಲಿ ಈ ಅಧಿಕಾರಿಗಳು ಏನೇನೋ ಕೆಲಸ ಮಾಡಿದ್ದಾರೆಂದು ಕಂಪ್ಲೆಂಟ್ಸ್ ಮಾಡಿರುವುದರಿಂದ, ಯಾರೇ ಆಗಲಿ ಒಂದು ಊರಿನಲ್ಲಿ 3ವರ್ಷ ಆದಮೇಲೆ ಯಾವ ಕಾರಣದಿಂದಲೇ ಆಗಲಿ ಅವರನ್ನು ಆ ಸ್ಥಳದಲ್ಲಿ ಇಡಕೂಡದು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಭರವಸೆ ಕೊಡುತ್ತೀರಾ ?

ಶ್ರೀ ಎಚ್. ಎನ್. ಕೊಟ್ರಬಸವಯ್ಯ ಸೋಗಿ.—ಅದನ್ನು ಒಂದು ಸಲಹೆಯಂತೆ ತೆಗೆದುಕೊಳ್ಳಬಹುದು.

Sri H. SIDDAVEERAPPA.—In view of the large volume of public opinion as expressed on the floor ofthis House, *viz.*, with regard to the inconvenience caused by these teachers staying in their villages, may I request the Leader of the House to examine this question and declare a policy statement on this question ?

(*No reply*)

## Adulteration of Shendi

346. Sri PRABHU RAO JAGADALE (Hulsoor).—

Will the Minister for Finance, Planning and Youth Welfare be pleased to state :—

the steps taken to check wide-spread adulteration in liquor particularly Shendi, that is being sold by Contractors in different Centres ?

Sri K. PUTTASWAMY (Minister for Law, Labour and Parliamentary Affairs) [On behalf of SRI RAMAKRISHNA HEGDE (Minister for Finance, Planning and Youth Welfare) ].—

Liquors like Beer, Wine, Brandy, Whisky, Rum, Gin are sold in sealed bottles. Hence there is no scope for adulteration. So far as Shendi is concerned, in cases of adulteration, action will be taken to punish the guilty. Frequent inspections are conducted by the Flying Squads and Excise Intelligence Bureau, besides constant vigilance by the regular staff.

ಶ್ರೀ ಪ್ರಭುರಾವ್ ಜಗದಾಳೆ.—ನಾನು ಉಪಪ್ರಶ್ನೆಗಳನ್ನು ಹಾಕುವುದಿಲ್ಲ.

ಶ್ರೀ ಎಂ. ನಾಗಪ್ಪ.—ಸ್ವಾಮಿ, ಅಡಲ್ಟ್ರೇಷನ್ ಸಂಬಂಧದಲ್ಲಿ ರಾಯಚೂರಿನಲ್ಲಿ 1966-67 ರಲ್ಲಿ ಹೈಡ್ರೋ ಎಲೆಕ್ಟ್ರಿಕ್ ಕೆಮಿಕರ್ಸ್ ತುಂಬಿದ್ದ ಒಂದು ರಾರಿಯನ್ನು ಹಿಡಿದುದ್ದುದು ಏನಾಯಿತು ?

ಶ್ರೀ ಕೆ. ಪುಟ್ಟಸ್ವಾಮಿ.– ನೋಟೀಸ್, ಸ್ವಾಮಿ.

ಶ್ರೀ ಎಂ. ಎಸ್. ಶಾಸ್ತ್ರಿ.—ಸ್ವಾಮಿ, ಮಂಡ್ಯದಲ್ಲಿ ತಯಾರಾಗತಕ್ಕಂಥ ಸ್ಪಿರಿಟ್ ಏನು ಇದೆಯೋ ಅದನ್ನು ತಂದು ಬೇರು ಬ್ರಾಂದಿಗೆ ಸೇರಿಸುತ್ತಿದ್ದಾರೆ. ಇದು ಜನಗಳಿಗೆ ತೊಂದರೆ ಯಾಗತಕ್ಕಂಥ ವಿಷಯ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಇಲ್ಲ.